# ಮಜಾ ಉಡಾಯಿಸಬೇಕು: ತಾರಾ

**ಅಶ್ವಿನಿ ಉದಯದ 'ನಯನತಾರಾ'ದ ತಾರಾ**



**◆ ಅಶ್ವಿನಿ 'ತಾರೆ' ಆದಾಗ ಹೇಗೆನಿಸುತ್ತದೆ?**

ಅಕ್ಕ– ತಂಗಿಯರಿಬ್ಬರ ವ್ಯಕ್ತಿತ್ವಗಳ ವೈರುಧ್ಯವೇ ಕಥೆಯ ಹಂದರ. ಇಲ್ಲಿ ಅಕ್ಕ ನಯನಾ ತುಂಬ ಮೃದು ಸ್ವಭಾವದವಳು. ಇವತ್ತಿನ ಹದಿಹರೆಯದ ಹುಡುಗಿಯರನ್ನು ಕಾಡುವ ತುಮುಲಗಳೇ ನನ್ನಲ್ಲಿಯೂ ಕಾಣಿಸಿಕೊಳ್ಳುತ್ತಿವೆ. ಜೀವನವನ್ನು ಅದ್ದೂರಿಯಾಗಿ ಅನುಭವಿಸಬೇಕು ಎನ್ನುವ ಯೋಚನೆ ಇದೆ. ನನ್ನ ಸ್ವಭಾವವನ್ನು ಅಕ್ಕನ ಮುಂದೆ ತೋರಿಸಿಕೊಳ್ಳುವುದಿಲ್ಲ. ಜೀವನದಲ್ಲಿ ಮುಂದೆ ಬರಬೇಕು. ನನ್ನ ಆಸೆ ಈಡೇರಿಸಿಕೊಳ್ಳಬೇಕು. ಯಾರೇ ಅಡ್ಡ ಬಂದರೂ ಲೆಕ್ಕಿಸುವ ಜಾಯಮಾನ ನನ್ನದಲ್ಲ. ನನ್ನ ವೈಯಕ್ತಿಕ ಬದುಕನ್ನು ಮಾತ್ರ ನೋಡಿಕೊಳ್ಳುತ್ತೇನೆ. ಸಾಮಾನ್ಯವಾಗಿ ಕಥೆಗಳಲ್ಲಿ ಅಕ್ಕ ತಂಗಿಯರ ನಡುವೆ ಮಧುರ ಮಮತೆ ಇರುತ್ತದೆ. ಆದರೆ ಇಲ್ಲಿ ಆ ಬಾಂಧವ್ಯ ಏಕಮುಖವಾಗಿದೆ. ಅಕ್ಕನಿಗೆ ಸ್ವಾರ್ಥದ ಬಯಕೆಗಳಿಲ್ಲ. ಅವಳಿಗೆ ತಂಗಿ ಮೇಲೆ ಅಪಾರ ಪ್ರೀತಿ. ಆದರೆ, ಅವಳ ಎದುರಿಗೆ ನಾನು ನಾಟಕ ಮಾಡುತ್ತಿರುತ್ತೇನೆ. ಅವಳ ವರ್ತನೆ ನನಗೆ ಕಿರಿಕಿರಿ ಆಗುತ್ತಿರುತ್ತದೆ. ನನ್ನ ಪ್ರಿಯತಮನ ಜೊತೆ ಹರಟೆ ಹೊಡೆಯುವುದು ಅವನ ಹತ್ತಿರ ಹೆಚ್ಚು ಹಣವನ್ನು ಖರ್ಚು ಮಾಡಿಸುತ್ತಿರುತ್ತೇನೆ. ಅವನ ಹತ್ತಿರವೂ ಮತ್ತೊಂದು ರೀತಿಯ ನಾಟಕದ ಪಾತ್ರ ಮಾಡುತ್ತೇನೆ. ಇರುವುದರಲ್ಲಿ ತೃಪ್ತಿ ಪಡೋಣ ಎಂದು ಅಕ್ಕ ಎಂದರೆ, ನಾನು ಇನ್ನೂ ಬೇಕು ಎಂದು ಬಯಸುತ್ತೇನೆ.

**◆ ನಟಿಯಾಗಿದ್ದು ಯಾಕೆ ಎಂದರೆ...?**

ನನ್ನ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರೀತಿ ನನ್ನನ್ನು ಇದರತ್ತ ಕರೆ ತಂದಿದೆ. ಕಾಲೇಜು ದಿನಗಳಲ್ಲಿ ಎಲ್ಲ ಕಾರ್ಯಕ್ರಮಗಳಲ್ಲಿ ಮುಂದಿರುತ್ತಿದ್ದೆ. ಡಾನ್ಸ್– ಕ್ರೀಡೆಗೆ ಮೊದಲ ಪ್ರಾಶಸ್ತ್ಯ ನೀಡುತ್ತಿದ್ದೆ. ಇಂತಹ ಸಂದರ್ಭದಲ್ಲಿಯೇ ನನ್ನ ಪರಿಚಯಸ್ಥರೊಬ್ಬರು ಸೀರಿಯಲ್‌ಗೆ ಆಡಿಷನ್ ನೀಡಲು ಆಹ್ವಾನ ನೀಡಿದರು. ಮೊದಲ ಆಡಿಷನ್ನಿನಲ್ಲೆ 'ಪಂಚ್ ಕಜ್ಜಾಯ'ದಲ್ಲಿ ಅವಕಾಶವೂ ಸಿಕ್ಕಿತು. ಅದರಲ್ಲಿ ಪ್ರಧಾನ ಪಾತ್ರವನ್ನೇ ನಿರ್ವಹಣೆ ಮಾಡಿದ್ದೆ. ಆಮೇಲೆ ಕಲರ್ಸ್‌ನ 'ರಾಧಾರಮಣ' ಸ್ಟಾರ್ ಸುವರ್ಣದ 'ಬಯಸದೆ ಬಳಿ ಬಂದೆ' ಮಾಡಿದ ಬಳಿಕ ಪುನಃ ಉದಯದ ಹೊಸ ಕಥೆಗೆ ಬಣ್ಣ ಹಚ್ಚಿದ್ದೇನೆ.

**◆ ಬಾಲ್ಯದ ಕನಸು ಏನಿತ್ತು? ಇದಕ್ಕೆ ನಿಮ್ಮ ಪೋಷಕರ ನೆರವು ಹೇಗಿತ್ತು?**

ಡಾನ್ಸರ್ ಆಗಬೇಕು ಎನ್ನುವ ಆಸೆ ಇತ್ತು. ಸಂಗೀತ ಕಲಿಯುವ ಬಯಕೆಯೂ ಇತ್ತು. ಆದರೆ ಅದಕ್ಕೆ ಅವಕಾಶ ಸಿಕ್ಕಲಿಲ್ಲ. ಶಾಲೆ ಕಾಲೇಜಿನಲ್ಲಿ ಯಾವುದೇ ಕಾರ್ಯಕ್ರಮ ಇದ್ದರೂ ನಾನು ಅಲ್ಲಿ ಇರ್ತಾ ಇದ್ದೆ. ಬಹುತೇಕ ಎಲ್ಲ ಆಟ ಆಡುತ್ತಿದ್ದೆ. ಅಧ್ಯಾಪಕರು ನನಗೆ ತುಂಬ ಬೆಂಬಲ ನೀಡುತ್ತಿದ್ದರು. ಕೆಲವೊಮ್ಮೆ ಅವರು ಅವಕಾಶ ಸಿಕ್ಕರೆ ಧಾರಾವಾಹಿಗೆ ಸೇರು ಎನ್ನುವ ಸಲಹೆಯನ್ನೂ ನೀಡಿದ್ದರು. ಪದವಿಯನ್ನು ಹಾಸನದಲ್ಲಿ ಓದಿದ್ದು, ಮೈಸೂರು ವಿಶ್ವವಿದ್ಯಾಲಯ ಆಗಿದ್ದರಿಂದ ಯುವ ದಸರಾ ಕಾರ್ಯಕ್ರಮದಲ್ಲಿಯೂ ಡಾನ್ಸ್ ಮಾಡಿದ್ದೇನೆ. ನನ್ನ ಉದ್ದೇಶ ಡಾನ್ಸರ್ ಆಗುವುದಾಗಿತ್ತು. ಆದರೆ ಕ್ಯಾಮೆರಾ ಎದುರಿಸುವ ಸಂದರ್ಭ ಬಂದಿತು. ಮೊದಲ ದಿನ ಆತಂಕ ಇತ್ತು ಕ್ರಮೇಣ ನನ್ನಲ್ಲಿಯೇ ಧೈರ್ಯ ಮೂಡಿದ್ದರಿಂದ ಇಲ್ಲಿ ನೆಲೆಯೂರಲು ಸಾಧ್ಯವಾಯಿತು.

ಅಮ್ಮ ಕೆರೊಲಿನ್ ಮೇರಿ, ತಂದೆ ಅಂಥೋನಿ ನಾನು ಹುಟ್ಟಿದ್ದು ಚಿಕ್ಕಮಗಳೂರು ಬೆಳೆದಿದ್ದು ಸಕಲೇಶಪುರ. ಸಕಲೇಶಪುರ, ಮಂಗಳೂರು, ಹಾಸನದಲ್ಲಿ ಓದಿದ್ದು. ಬೆಂಗಳೂರಿನ ಆರಂಭದಲ್ಲಿ ಬಂದಾಗ ದಿಗಿಲುಗೊಂಡಿದ್ದೆ ನನಗೆ ವಿಶ್ವಾಸವನ್ನು ತುಂಬಿದವರು ಪೋಷಕರು. ಸಾಧ್ಯವಾದರೆ ಮಾಡು ಇಲ್ಲದಿದ್ದರೆ ಮರಳಿ ಮನೆಗೆ ಬಾ ಎಂದರು. ಬೆಂಗಳೂರು ನನಗೆ ಹೊಸದು. ಹಾಸ್ಟೆಲ್‌ನಲ್ಲಿ ಇದ್ದು ಓದಿದ ನಾನು ಅದುವರೆಗೂ ಗೆಳತಿಯರ ಜೊತೆ ಇರುತ್ತಿದ್ದೆ. ಬೆಂಗಳೂರಿನ ಒಬ್ಬಂಟಿ ಬದುಕು ಭಯವನ್ನು ಹುಟ್ಟಿಸಿತ್ತು. ಕನಸನ್ನು ಹೊತ್ತು ಬಂದಿದ್ದೇನೆ ಏನಾದರೂ ಮಾಡಲೇಬೇಕು ಎಂದು ನಿರ್ಧರಿಸಿದ್ದರಿಂದ ಇಲ್ಲಿ ಉಳಿದಿದ್ದೇನೆ. ಆಗ ಎದೆಗುಂದಿ ಹೋಗಿದ್ದರೆ ಇನ್ನೇನು ಆಗುತ್ತಿತ್ತೋ ಗೊತ್ತಿಲ್ಲ. ಈಗ ಅಂತಹ ಸಮಸ್ಯೆಯೇ ಇಲ್ಲ. ಮಹಾನಗರಿಗೆ ಹೊಂದಿಕೊಂಡಿದ್ದೇನೆ.

**◆ ಕಾಮಿಡಿ ಮತ್ತು ಭಾವನಾತ್ಮಕ ಕಥೆಗಳಲ್ಲಿ ನಿಮಗೆ ಆದ ಅನುಭವ ಹೇಳಿ...**

ಮನುಷ್ಯ ಒಂದೇ ರೀತಿ ವರ್ತಿಸುವುದಿಲ್ಲ. ಎಲ್ಲ ಸಮಯದಲ್ಲೂ ತಮಾಷೆಯಲ್ಲೇ ಕಾಲ ಕಳೆಯಲು ಆಗುವುದಿಲ್ಲ. ಅಂತೆಯೇ ಗಂಭೀರ, ಇಲ್ಲವೇ ದುಃಖದಿಂದ ಅಳುತ್ತಾ ಕೂರುವುದಿಲ್ಲ. ಅಭಿನಯಿಸುವ ಪಾತ್ರಗಳು ಕೂಡ ಅಷ್ಟೆ. ಕಾಮಿಡಿ ಮಾಡುತ್ತೇನೆ ಅನ್ನುವ ಭರವಸೆ ನನಗೆ ಇರಲಿಲ್ಲ. ಕಾಮಿಡಿಯಲ್ಲಿ ನಾಲ್ಕಾರು ಕಲಾವಿದರು ಇರುತ್ತೇವೆ. ಡೈಲಾಗ್ ಪಂಚಿಗ್ ಅನ್ನುವುದನ್ನು ತೆಗೆದುಕೊಂಡು ಮುಂದುವರಿಸುತ್ತೇವೆ. ಒಂದು ಸೀನ್ ನಾಲ್ಕು ಜನ ಇದ್ದರೆ ಕೊನೆತನಕ ಇರುತ್ತೇವೆ. ಡೈಲಾಗ್ ಪಟಾಪಟ್ ಹೊಡೆಯುತ್ತೇವೆ. ಸೆಂಟಿಮೆಂಟ್ ಕಥೆಗೆ ಪ್ರತಿಕ್ರಿಯೆ ಹೆಚ್ಚಿರುತ್ತದೆ– ದೃಶ್ಯಗಳು ಹೆಚ್ಚಿರುತ್ತವೆ. ಒಂದೇ ಸೀನ್‌ನಲ್ಲಿ ಬೇರೆ ಬೇರೆಯ ಭಾವ ಭಂಗಿಯನ್ನು ಪ್ರಕಟಿಸಬೇಕಾಗುತ್ತದೆ. ಯಾವುದು ಚೆಂದ ಅನ್ನುವುದಕ್ಕಿಂತ ಕಲಾವಿದರಾಗಿ ಎಲ್ಲ ಪಾತ್ರವನ್ನೂ ನಿರ್ವಹಿಸಬೇಕು. ಅದಕ್ಕೆ ಎಷ್ಟು ನ್ಯಾಯ ನೀಡುತ್ತೇವೆ ಎನ್ನುವುದರ ಮೂಲಕ ನಮ್ಮನ್ನು ನಾವು ಅಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ.

**■ ರಾಘವೇಂದ್ರ ಕೆ.**